

ಹುಟ್ಟಿ ಕೊನೇಪಕ್ಷ ಒಂದು ಗುಲಾಬಿಯನ್ನಾದರೂ ಬಯಸದಿರುವ ಈಕೆಯೊಬ್ಬಳು ಅಪರೂಪದ, ಅಸಾಮಾನ್ಯ ಸ್ತ್ರೀಯೇ ಸರಿ! ಇವಳನ್ನು ನಾನು ಗಂಭೀರವಾಗಿಯೇ ತೆಗೆದುಕೊಳ್ಳಬೇಕು. ಒಡವೆ ವಸ್ತ್ರಗಳನ್ನು ಕೇಳಿ ಪಡೆದುಕೊಂಡು, ಅತ್ತೂ ಕರೆದೂ ಔತಣ ಮಾಡಿಸಿಕೊಂಡು ತಿರುಗಿಯೂ ನೋಡದೇ ಹೊರಟುಹೋಗುವ ಹೆಣ್ಣುಗಳನೇಕರನ್ನು ಗೆಳೆಯರ, ಪರಿಚಿತರ ಬದುಕಿನಲ್ಲಿ ಕಂಡಿರುವಾಗ ನನ್ನನ್ನಿವಳು ಕೇಳುತ್ತಿರುವುದು ಒಂದು ಕಥೆ ಅಷ್ಟೇ. ಅದನ್ನವಳಿಗೆ ಕಳಿಸಿದ ಮೇಲೂ ಅದು ನನ್ನದಾಗಿಯೇ ಉಳಿಯುತ್ತದೆ, ಅವಳು ಉಳಿಸಿಕೊಂಡರೂ ಸರಿ ಬಿಟ್ಟರೂ ಸರಿ, ನನ್ನಲ್ಲಂತೂ ಅದು ಶಾಶ್ವತವಾಗಿ ಉಳಿಯುತ್ತದೆ. ಅವಳೇನಾದರೂ ಹುಡುಗಾಟವಾಡುತ್ತಿದ್ದರೂ ಪರವಾಗಿಲ್ಲ, ಆ ನೆಪದಲ್ಲಿ ನಾನು ಮತ್ತೆ ಕಥೆ ಬರೆಯಲು ಕುಳಿತಿದ್ದೇನೆ, ಈ ಕಥೆಯನ್ನು ನಾನು ಬರೆದು ಮುಗಿಸುವುದರಲ್ಲಿ ಯಶಸ್ವಿಯಾದರೆ ಎರಡು–ಮೂರು ತಿಂಗಳುಗಳಿಂದ ನಿಂತೇ ಹೋಗಿರುವ ನನ್ನ ಬರವಣಿಗೆ ಹೊಸಹುಟ್ಟು ಪಡೆಯಬಹುದು. ಅವಳ ಹುಟ್ಟುಹಬ್ಬ ನಿಜವೋ ನಾಟಕವೋ, ನನಗದು ಮುಖ್ಯವಲ್ಲ. ಅದರಿಂದಾಗಿ ನನ್ನ ಕಥಾಯಾನ ಮತ್ತೆ ಆರಂಭವಾದರೆ ನನಗದು ನಾನೇ ಕೊಟ್ಟುಕೊಳ್ಳುವ ಬಹುದೊಡ್ಡ ಉಡುಗೊರೆ! ಅವಳ ಬಗ್ಗೆ ಬೇಸರ, ಅಸಹನೆ, ತಿರಸ್ಕಾರಗಳಂತಹ ಯಾವುದೇ ಋಣಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳದಿರಲು, ಬದಲಾಗಿ ಅವಳಿಗೆ ಕೃತಜ್ಞನಾಗಿರಲು ನನಗೆ ಇದೊಂದು ಕಾರಣವೇ ಸಾಕು.

ಹೀಗನಿಸಿದ್ದೇ ತಡ, ಸರ್ರನೆ ಚೇರ್ ಮುಂದೆ ಸರಿಸಿದೆ, ಪಕ್ಕಗಟ್ಟಿದ್ದ ಲ್ಯಾಪ್‌ಟಾಪ್ ಪರದೆಯನ್ನು ಬೆಳ್ಳಗಾಗಿಸಿದೆ.

ಆಮೇಲೆ ಸಮಯ ಹೇಗೆ ಸರಿಯಿತೆನ್ನುವುದು ನನ್ನ ಗಮನಕ್ಕೆ ಬರಲೇ ಇಲ್ಲ.

ಕಥೆ ಮುಕ್ತಾಯವಾದಾಗ ಮನಸ್ಸಿನ ತುಂಬಾ ಏನೋ ಬಣ್ಣಿಸಲಾಗದ ಸಂತೋಷ, ಪದಗಳಲ್ಲಿ ವ್ಯಕ್ತಪಡಿಸಲಾಗದ ತೃಪ್ತಭಾವ. ಶರೀರವೂ ಹಗುರಾದಂತೆ. ಮೆದುಳಿಗಂತೂ ಪೂರ್ಣ ಎಚ್ಚರ. ಒಟ್ಟಾರೆಯಾಗಿ ಜಗತ್ತೆಲ್ಲಾ ಸುಂದರ ಅನಿಸುವ ಭಾವ. ಬಹಳ ದಿನಗಳ ಮೇಲೆ ಹೀಗಾಗುತ್ತಿದೆ. ನನ್ನ ಕಥಾಯಾನದ ಪ್ರಾರಂಭದ ದಿನಗಳಲ್ಲಿ ಪ್ರತಿ ಸಲ ಕಥೆ ಪೂರ್ಣಗೊಳಿಸಿದಾಗೆಲ್ಲಾ ಹೀಗಾಗುತ್ತಿತ್ತು. ಕಥೆ ಬರೆಯುವುದು ಮಾಮೂಲಾಗಿಬಿಟ್ಟಮೇಲೆ ಹೀಗನಿಸುವುದು ನಿಂತೇಹೋಯಿತು. ಪಿಯುಸಿ ಇಕನಾಮಿಕ್ಸ್‌ನಲ್ಲಿ ಓದಿದ್ದ ಯಾರದೋ ಹೆಸರು ನೆನಪಾಗದ ವಿದ್ವಾಂಸನ 'ಥಿಯರಿ ಆಫ್ ಡಿಮಿನಿಶಿಂಗ್ ಮಾರ್ಜಿನಲ್ ಯುಟಿಲಿಟಿ' ಬರವಣಿಗೆಗೂ ಅನ್ವಯವಾಗುತ್ತದೆಯೇ?

ನಗು ಬಂತು.

ಹಾಗೇ ನಗುತ್ತಾ ಮತ್ತೊಮ್ಮೆ ಮೈಮುರಿದೆ. ಕಣ್ಣುಗಳನ್ನು ಮುಚ್ಚಿದಂತೇ ಕೊರಳ ಹಿಂದೆ ಹೆಣೆದುಕೊಂಡೇ ಇದ್ದ ಬೆರಳುಗಳನ್ನು ಬಿಡಿಸಿ ಮುಂದೆ ತಂದು ತೊಡೆಗಳ ಮೇಲೆ ತಾಳ ಹಾಕಿದೆ. ತಲೆ ಮೇಲೆತ್ತಿ ಕಣ್ಣು ತೆರೆದೆ. ಡಿಜಿಟಲ್ ಗಡಿಯಾರದಲ್ಲಿ ಕಂಡ ಸಮಯ 11:11.

'ಆಹ್!' ಎಂದು ಉದ್ಗರಿಸಿ ನೆಟ್ಟಗೆ ಕೂತು ಸೋಜಿಗವೊಂದನ್ನು ಕಂಡಂತೆ ಆ ಕೆಂಪು ಅಂಕೆಗಳನ್ನೇ ಕಣ್ಣಗಲಿಸಿ ನೋಡಿದೆ

ಬೆಳಿಗ್ಗೆ ಫಸ್ಟ್ ಅವರ್ ಕ್ಲಾಸ್ ಮುಗಿಸಿ ಮೆಟ್ಟಿಲೇರಿ ನನ್ನ ಚೇಂಬರ್‌ಗೆ ಹೋಗಿ ಮೊಬೈಲ್ ಫೋನ್ ಪರದೆಯ ಮೇಲೆ ಬೆರಳಿಟ್ಟಾಗಲೂ ಕಣ್ಣಿಗೆ ಬಿದ್ದದ್ದು ಇದೇ ಸಂಖ್ಯೆ. ನಿನ್ನೆಯೋ ಮೊನ್ನೆಯೋ ಒಮ್ಮೆ ಇದನ್ನೇ ಕಂಡ ಮಸುಕು ನೆನಪು. ಬಹುತೇಕ ನ್ಯೂ ಏಜ್ ಗುರುಗಳೆಲ್ಲರೂ ಹೇಳುವ ಪ್ರಕಾರ ಈ ಸಂಖ್ಯೆ ತಾನಾಗಿಯೇ ಮತ್ತೆಮತ್ತೆ ಕಾಣಿಸಿಕೊಂಡರೆ ಅದು ಏನೋ ಒಳ್ಳೆಯದರ ಮುನ್ಸೂಚನೆ! ಬದುಕಿನ ಒಂದು ಮಹತ್ತರ ತಿರುವಿನ ಸ್ಪಷ್ಟ ಸೂಚನೆ ಎಂದೂ ಹೇಳುವುದುಂಟು.

ಒಮ್ಮೆ ಉಸಿರೆಳೆದುಕೊಂಡು ತಲೆ ಕೆಳಗಿಳಿಸಿದೆ. ಹಾಗೇ ಕಿಟಕಿಯತ್ತ ತಿರುಗಿದೆ, ಬೆರಗಾದೆ.

ಚಂದ್ರ ಬಂದಿದ್ದ. ಕೃಷ್ಣ ಪಕ್ಷದ ಸಪ್ತಮಿಯ ಚಂದ್ರ!

ಚಕ್ಕನೆ ಮೇಲೆದ್ದೆ. ಸರ್ರನೆ ಬಾಲ್ಕನಿಯ ಬಾಗಿಲತ್ತ ಹಾರಿದೆ.

ರಾತ್ರಿಯ ನೀರವತೆ ಸುತ್ತಲೂ ತಾನೇ ತಾನಾಗಿ ಆವರಿಸಿಕೊಂಡಿತ್ತು. ನಿನ್ನೆಗಿಂತ ಮೊನ್ನೆಗಿಂತ ಈ